## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
### ವಾರ್ಡ್ 63, ಜಯಮಹಲ್
### ವಾರ್ಡ್ ಸಮಿತಿ ಸಭೆಯ ನಡಾವಳಿಗಳು

ದಿನಾಂಕ:19-02-2022 ರಂದು ಶನಿವಾರ ಬೆಳಿಗ್ಗೆ 11.00 ಗಂಟೆಗೆ ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ:63 ಬಿಬಿಎಂಪಿ ರವರ ಅಧ್ಯಕ್ಷತೆಯಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ನಡೆಸಲಾಯಿತು. ಹಾಗೂ ಮಾನ್ಯ ನೋಡೆಲ್ ಅಧಿಕಾರಿಗಳು ವಿ.ಸಿ ಮುಖಾಂತರ ಸಭೆಯನ್ನು ನಡೆಸಿಕೊಟ್ಟರು ಹಾಗೂ ಸಮಿತಿಸಭೆಗೆ ಹಾಜರಾದ ಅಧಿಕಾರಿಗಳು ಹಾಗೂ ಸಮಿತಿ ಸದಸ್ಯರುಗಳು,

| ಕ್ರಮ ಸಂಖ್ಯೆ: | ಹೆಸರು | ಸಮಿತಿ ಸಭೆಯ | ಮೊಬೈಲ್ ಸಂಖ್ಯೆ |
|---|---|---|---|
| 1 | ಶ್ರೀಮತಿ.ಖಾಜಿ ನಫೀಸಾ | ನೋಡಲ್ ಆಧಿಕಾರಿಗಳು | |
| 2 | ಶ್ರೀಮತಿ.ಗೌರಿ ಸಿಜ್ಞಾ | ಸದಸ್ಯರು | |
| 3 | ಶ್ರೀಮತಿ. ಅಭಿಲಾಶ್ ಸಚದೇವ್ | ಸದಸ್ಯರು | |
| 4 | ಶ್ರೀಮತಿ. ಪ್ರೇಮ ಕಾಕ್‌ಡೆ | ಸದಸ್ಯರು | |
| 5 | ಶ್ರೀ. ಮಹಮದ್ ಜಾವೇದ್.ಎ.ಎಸ್ | ಸಹಾಯಕ ಕಾರ್ಯಪಾಲಕ ಅಭಿಯಂತರರು | |
| 6 | ಶ್ರೀ.ಧರ್ಮರಾಜ್ ಜಿ ನಾಯಕ್ | ಸಹಾಯಕ ಅಭಿಯಂತರರು | |
| 7 | ಶ್ರೀ.ಜೋಸಫ್ ಪ್ರಕಾಸ್ | ಕೆಲಸ ಪರಿವೀಕ್ಷಕರು (ಪ್ರಭಾರ) | |

**ದಿನಾಂಕ:19-02-2022 ರಂದು ಶನಿವಾರ ಬೆಳಿಗ್ಗೆ 11.00 ಗಂಟೆಗೆ ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗಳು**

1) ಶ್ರೀಮತಿ.ಖಾಜಿ ನಫೀಸಾ ನೋಡಲ್ ಆಧಿಕಾರಿಗಳು ಸಮಿತಿ ಸಭೆಯ ಎಲ್ಲಾ ಅಧಿಕಾರಿಗಳು ಹಾಗೂ ಸದಸ್ಯರನ್ನು ಸ್ವಾಗತಿಸುತ್ತಾ, ಸಭೆಯನ್ನು ಪ್ರಾರಂಭಿಸಲು ಸೂಚಿಸಿದರು ಹಾಗೂ ಹಿಂದಿನ ಸಭೆಯ ನಡಾವಳಿಗಳನ್ನು ಸಭೆಗೆ ಮಂಡಿಸಿದರು.

2) ಸಭೆಯ ನಡಾವಳಿಗಳು ಹಾಗೂ ತೆಗೆದುಕೊಂಡು ಕ್ರಮಗಳ ಬಗ್ಗೆ ಸಭೆಯಲ್ಲಿ ವಿವರಿಸಲಾಯಿತು. ಹಾಗೂ ಇಂದಿನ ಸಭೆಯಲ್ಲಿ ಚರ್ಚಿಸುವ ಸಂಬಂಧ ಮಾನ್ಯ ಸದಸ್ಯರುಗಳಲ್ಲಿ ವಿನಂತಿಸಲಾಯಿತು.

Scanned with CamSca

3) ಶ್ರೀಮತಿ.ಗೌರಿ ಸಿಜ್ಮಾ ರವರು ಮಾತಾನಾಡಿ ಜಯಮಹಲ್ ಮುಖ್ಯರಸ್ತೆಯಲ್ಲಿ ಟ್ರಾಫಿಕ್ ಸಮಸ್ಯೆ ಜಾಸ್ತಿಯಾಗಿದ್ದು, ಅಲ್ಲಲ್ಲಿ ಡೆಬ್ರೀಸ್‌ಗಳು ಸಂಗ್ರಹಣೆಯಾಗಿದ್ದು ಕೂಡಲೇ ತೆರವುಗೊಳಿಸಲು ಕ್ರಮಕೈಗೊಳ್ಳಬೇಕು ಮತ್ತು ಗುಲಾಬಿ ಪ್ರೌಢಶಾಲೆ ಪಕ್ಕದಲ್ಲಿ ಖಾಲಿ ಜಾಗವಿದ್ದು ಸದರಿ ಜಾಗದಲ್ಲಿ ಅನಧಿಕೃತವಾಗಿ ಡೆಬ್ರೀಸ್ ಮತ್ತು ಗಿಡಗಳು ಬೆಳೆದು ಸೊಳ್ಳೆಗಳ ಕಾಟ ವಿಪರೀತವಾಗಿದ್ದು ಕೂಡಲೇ ನಿವೇಶನ ಮಾಲೀಕರಿಂದ ನಿವೇನವನ್ನು ಶುಚಿಗೊಳಿಸಲು ಕ್ರಮಕೈಗೊಳ್ಳುವಂತೆ ಸಲಹೆ ನೀಡಿದರು.

4) ಶ್ರೀಮತಿ. ಪ್ರೇಮ ಕಾಕ್‌ಡೆ ರವರು ಮಾತನಾಡಿ ಜಯಮಹಲ್ ಪಾರ್ಕ್‌ನ ನಿರ್ವಹಣೆಯನ್ನು ಸರಿಯಾಗಿ ಮಾಡದೆ ಇದ್ದು ತೋಟಗಾರಿಕೆ ಅಧೀಕ್ಷಕರಿಗೆ ನಿರ್ದೇಶನ ನೀಡುತ್ತಾ, ಪಾರ್ಕ್ ನಿರ್ವಹಣೆ ಮಾಡುವ ಗುತ್ತಿಗೆದಾರರಿಗೆ ಸಲಹೆ ನೀಡಲು ಸೂಚಿಸಿದರು. ಮತ್ತು ಮಳೆಗಾಲ ಸಮೀಪಿಸುತ್ತಿರುವುದರಿಂದ ಗ್ಯಾಂಗ್‌ಮೆನ್‌ಗಳನ್ನು ಬಳಸಿ ಶೋಲ್ಡರ್ ಡ್ರೇನ್‌ಗಳನ್ನು ಶುಚಿಗೊಳಿಸಲು ಸೂಚಿಸಿದರು.

5) ಶ್ರೀಮತಿ. ಅಭಿಲಾಶ್ ಸಚದೇವ್ ರವರು ಮಾತನಾಡಿ ಜಯಮಲ್ ಬಡಾವಣೆಯಲ್ಲಿ ಮರಗಳು ಜಾಸ್ತಿ ಇದ್ದು ಈ ಸಮಯದಲ್ಲಿ ಮರದ ಎಲೆಗಳು ಹೆಚ್ಚಾಗಿ ಉದುರುತ್ತಿರುವುದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಪೌರಕಾರ್ಮಿಕರನ್ನು ನಿಯೋಜಿಸಿ, ರಸ್ತೆಗಳನ್ನು ಶುಚಿಯಾಗಿಡಲು ಸೂಚಿಸುತ್ತಾ, 1ನೇ ಮುಖ್ಯರಸ್ತೆ, ನಂದಿದುರ್ಗಾರಸ್ತೆ ಮತ್ತು 5ನೇ ಮುಖ್ಯರಸ್ತೆಗಳಲ್ಲಿ ಸಾರ್ವಜನಿಕರ ವಾಹನಗಳ ನಿಲುಗಡೆಯನ್ನು ತಡೆಗಟ್ಟಲು ಟ್ರಾಫಿಕ್ ಇಲಾಖೆಯವರಿಗೆ ನಿರ್ದೇಶನ ನೀಡಲು ಸೂಚಿಸಿದರು.

6) ಸಭೆಯಲ್ಲಿ ಮಾನ್ಯ ನೋಡಲ್ ಅಧಿಕಾರಿಗಳು ಎಲ್ಲಾ ಅಂಶಗಳನ್ನು ಪರಿಗಣಿಸಿ ಸೂಕ್ತ ಕ್ರಮಕೈಗೊಳ್ಳಲು ಆದೇಶಿಸಿದರು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯ ಮಾಡಲಾಯಿತು

ಮಾನ್ಯ ನೋಡಲ್ ಅಧಿಕಾರಿಗಳು
ವಾರ್ಡ್–63, ಜಯಮಹಲ್
ಬಿ.ಬಿ.ಎಂ.ಪಿ

ಸದಸ್ಯ ಕಾರ್ಯದರ್ಶಿಗಳು
ವಾರ್ಡ್–63, ಜಯಮಹಲ್
ಬಿ.ಬಿ.ಎಂ.ಪಿ

Scanned with CamSca